
# ಒಳಗಿನೊಳಗಿನ ಒಳಗನ್ನು ಪುಳಕಗೊಳಿಸುವ ಭಾವ

ನಂದಿನಿ ವಿಶ್ವನಾಥ ಹೆದ್ದುರ್ಗ



'ಹೋಗು ನಿದ್ದೆಯೇ, ಹೋಗು,
ನಿನಗಿಲ್ಲಿ ಎಡೆಯಿಲ್ಲ
ಪ್ರೇಮಿಗಳ ಸೀಮೆಯಲ್ಲಿ;
ನಾವೀಗ ಅನಿಮಿಷರು,
ನಮ್ಮ ಈ ಮಿಲನ
ಗಂಧರ್ವ ವೈಭೋಗದಂತೆ'

ಜೀವನ ಭಾವಯಾನವೇ ಆಗಿದ್ದಲ್ಲಿ ಒಲವೆನ್ನುವುದು ಜೇನಿನ ಸೆಲೆಯೇ ಸರಿ. ಹೆಸರಿಟ್ಟಿರುವ ಹತ್ತೆಂಟು ಭಾವಗಳಲ್ಲದೆ ಪದಕೋಶದಲ್ಲಿನ ಅಕ್ಷರಗಳ ಹಂಗಿಗೆ ಒಳಪಡದ ಅದೆಷ್ಟೋ ಭಾವಗಳ ಒಟ್ಟು ಮೊತ್ತವೇ ಈ ಬದುಕು. ಅಗಣಿತ ಭಾವಗಳ ಈ ಪಂಕ್ತಿಯಲ್ಲಿ ನಿಸ್ಸಂದೇಹವಾಗಿ ಪ್ರಥಮ ಸ್ಥಾನದಲ್ಲಿ ನಿಲ್ಲುವುದು ಪ್ರೇಮವೇ.

'ಒಳಗಿನೊಳಗಿನ ಒಳಗನ್ನು ಪುಳಕಗೊಳಿಸುವ' ಒಂದೇ ಒಂದು ಭಾವವಿದ್ದರೆ ಅದು ಪ್ರೇಮ. ಜಂಗಮ ರೂಪಿ ಜಗತ್ತು ನಿಶ್ಚಲವಾಗುವುದು ಪ್ರೇಮಿಗೆ ಮಾತ್ರ. ಅವನಿಗವಳ ಧ್ಯಾನದಲ್ಲಿ ಸಂತೆಯೊಳಗೂ ಏಕಾಂತವೇ, ಸಂತತ್ವವೇ. ತುಟಿಯ ಕಿರುನಗು, ಕಣ್ಣಬೆಳಕು, ಕೆನ್ನೆಹೊಳಪು, ದೇಹಕಾಂತಿ ಚಿಮ್ಮುತ್ತಿದೆಯೆಂದಾದರೆ ಅಲ್ಲೊಂದು ಪ್ರೇಮದ ಆವಾಹನೆಯಾಗಿದೆ ಎಂದೇ ಅರ್ಥ.

ಪ್ರೇಮಕ್ಕೆ ಜಗದ ವ್ಯಾಕರಣದ ಗೋಜಿಲ್ಲ. ಇಲ್ಲಿ ಅವಳು ನದಿಯಾದರೆ ಅವನು ಪೊರೆವ ದಡ, ಅವಳು ಹರಿವಾದರೆ ಅವನು ಧಾರಣರೂಪಿ. ಹಾಗಾಗಿಯೇ, ಪಡೆದು ಕಳೆದುಕೊಂಡರೂ ಚಿಂತೆಯಿಲ್ಲ, ಪಡೆಯದೆ ಉಳಿದವ ಜಗದ ಅತೀ ಅದೃಷ್ಟಹೀನ ಎನ್ನುವುದು ಪ್ರೇಮದ ವ್ಯಾಖ್ಯಾನ. ನೋಟಕ್ಕೋ, ಮಾತಿಗೋ, ಸ್ಪರ್ಶಕ್ಕೋ, ಬುದ್ಧಿಗೋ ಆಮಿಷ ಹೂಡಿ ಹುಟ್ಟುವ ಈ ಪ್ರೇಮ ತೃಪ್ತಗೊಳ್ಳುವುದು ಕಾಮದಿಂದಲೇ. ತನುಮನ ಬೆಸೆದು ಹುಟ್ಟಿದ ಈ ಒಸಗೆ ಹೊಮ್ಮಿಸುವ ಉನ್ಮಾದವೇ ಅತೀ ತೀವ್ರ. ಅದಕ್ಕಾಗಿಯೇ ಗೋಪಾಲಕೃಷ್ಣ ಅಡಿಗರು–